# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2022 ಫ್ರಾಸಾ-03
ಚಾಸಾ-02

ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನಾಗರಾಜು |
| **ತಂದೆಯ / ಗಂಡನ ಹೆಸರು** | ಭೀಮಣ್ಣ |
| **ವಯಸ್ಸು** | 25 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ಬಂಡಿಪಾಳ್ಯ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ರಮೇಶ ನನಗೆ ಮಾವನಾಗಬೇಕು. ಆರೋಪಿಯ ಪರಿಚಯ ಇರುತ್ತದೆ ಅವನು ನನಗೆ ಸಂಬಂಧಿಕನಾಗಬೇಕು ಮತ್ತು ನಮ್ಮ ಊರಿನವನು. ದಿ.01.02.2022 ರಂದು ಮದ್ಯಾಹ್ಣ 3-30 ಗಂಟೆಗೆ ನಾನು , ಚಾಸಾ-1 ಮತ್ತು 2 ರವರು ಚಿಕ್ಕಣ್ಣ ರವರ ಮನೆ ಹತ್ತಿರ ಕೂತಿದ್ದಾಗ ಚಿಕ್ಕಣ್ಣ ರವರ ಮನೆಯಲ್ಲಿ ಯಾರೂ ಇರಲಿಲ್ಲ. ಆರೋಪಿ ರಾಮಯ್ಯ ರವರ ಅಣ್ಣ ಹನುಮಂತರಾಯಪ್ಪ ರವರ ಮನೆ ಹಿಂಭಾಗದಲ್ಲಿ ಮೃತ ರಮೇಶನನ್ನು ನೋಡಿ ತನ್ನ ಅಣ್ಣನ ಮಗಳು ರಾಧಳನ್ನು ಶಿವನಗರದ ನಾಗೇಶನಿಗೆ ಕೊಟ್ಟು ಮದುವೆ ಮಾಡಿಸುತ್ತಾನೆ ಎಂದು ಬೈದುಕೊಳ್ಳುತ್ತಿದ್ದ. ಆಗ ರಮೇಶ ಎಲ್ಲರನ್ನೂ ಯ್ಯಾಕೆ ಬೈದುಕೊಳ್ಳುತ್ತಿಯಾ ಎಂದು ಕೇಳಿದಾಗ ಆರೋಪಿ ನೀನೇ ಹೋಗಿ ಅವಳ ಮದುವೆ ಮಾಡಿಸುತ್ತೀಯಾ ಎಂದು ಹೇಳಿ ನೀನು ಇದ್ದರೆ ತಾನೇ ಎಂದು ಬೋಳಿಮಗನೆ ಎಂದು ಕೆಟ್ಟ ಮಾತುಗಳಿಂದ ಬೈದು ಅಲ್ಲಿದ್ದ ದೊಣ್ಣೆಯನ್ನು ತೆಗೆದುಕೊಂಡು ರಮೇಶನ ತಲೆಗೆ ಮತ್ತು ಪಕ್ಕೆಗೆ, ಬಲಕಣ್ಣಿನ ಮೇಲಕ್ಕೆ ಜೊರಾಗಿ 2-3 ಏಟು ಹಾಕಿರುತ್ತಾನೆ. ಆಗ ರಮೇಶ ಸ್ಥಳದಲ್ಲಿಯೇ ಕುಸಿದು ಬಿದ್ದಿರುತ್ತಾನೆ ಅಲ್ಲಿಯೇ ಇದ್ದ ನಾನು ,

ಚಾಸಾ-02

ಚಾಸಾ-1, 3 , 5 ಮತ್ತು 6 ರವರು ಹತ್ತಿರ ಹೋಗಿ ನೋಡಿದಾಗ ರಮೇಶನ ತಲೆಗೆ ರಕ್ತಗಾಯವಾಗಿತ್ತು , ಆತನನ್ನು ಕಾರಿನಲ್ಲಿ ತುಮಕೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಚಿಕಿತ್ಸೆ ಕೊಟ್ಟು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಅಲ್ಲಿಂದ ಅವರ ಸಂಬಂಧಿಕರು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ದಿಗ್ವಿಜಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ದಿ.04.02.2022 ರಂದು ಸಂಜೆ 5-30 ಗಂಟೆಗೆ ರಮೇಶನ ಮಗ ಲಕ್ಷ್ಮೀಕಾಂತ ಫೋನ್ ಮಾಡಿ ಮದ್ಯಾಹ್ನ 2-20 ರಿಂದ 2-30 ಗಂಟೆಗೆ ತಂದೆ ತೀರಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ಆ ದಿನ ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ದ.ಪ.ಸಂಹಿತೆ ಕಲಂ 164(5)ರ ಅಡಿಯಲ್ಲಿ ನೀಡಿದ ಹೇಳಿಕೆಯನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-12 ಎಂದು , ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಶ್ರೀ. ವಿ.ಆರ್.ಆರ್. ವಕೀಲರಿಂದ ಆರೋಪಿ ಪರವಾಗಿಃ-**

ಮೃತ ರಮೇಶನ ತಾಯಿ ಮತ್ತು ಆರೋಪಿಯ ತಾಯಿ ಅಕ್ಕ ತಂಗಿಯರು ಎಂದರೆ ನನಗೆ ಗೊತ್ತಿಲ್ಲ. ಮೃತ ರಮೇಶ್ ಮೂಲತಃ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ಮೃತ ರಮೇಶ ಮತ್ತು ಅವರ ತಾಯಿಯನ್ನು ಆರೋಪಿ , ಅವರ ಅಣ್ಣ ಮತ್ತು ಅವರ ತಾಯಿ ಊರಿನಿಂದ ಕರೆದುಕೊಂಡು ಬಂದು ತಮ್ಮ ಊರಿನಲ್ಲಿ ಇರಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಅವರ ಅಣ್ಣ ಸೇರಿ ರಮೇಶ್ ನಿಗೆ ಒಂದು ಮನೆ ಕಟ್ಟಿಸಿಕೊಟ್ಟಿದ್ದರು ಮತ್ತು ಜಮೀನನ್ನು ಉಳುಮೆ ಮಾಡಲು ಕೊಟ್ಟಿದ್ದರು ಎಂದರೆ ಸರಿಯಲ್ಲ. ಬಂಡಿಪಾಳ್ಯ ಗ್ರಾಮದಲ್ಲಿ ಅಂದಾಜು 30 ಮನೆಗಳು ಇರುತ್ತವೆ. ಸದರಿ ಊರು ಚಿಕ್ಕ ಊರು ಆದ ಕಾರಣ ಎಲ್ಲಾ ಮನೆಗಳ ವೈಯಕ್ತಿಕ ವಿಚಾರಗಳು ಗೊತ್ತಿರುತ್ತದೆ ಎಂದರೆ ಎಲ್ಲಾ ಮನೆಗಳ ವಿಚಾರ

ಚಾಸಾ-02

ಗೊತ್ತಿರುವುದಿಲ್ಲ. ರಮೇಶ ಚಿಕ್ಕ ಹುಡುಗನಾಗಿದ್ದಾಗಿನಿಂದ ಆರೋಪಿ ರಾಮಯ್ಯ ರವರ ತಾಯಿ ಸಾಕಿ , ಬೆಳೆಸಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೃತ ರಮೇಶನ ಮಗನಾದ ಲಕ್ಷ್ಮೀಕಾಂತರಾಜು ರವರು ಆರೋಪಿ , ಅವರ ತಾಯಿ ಮತ್ತು ಅವರ ಅಣ್ಣ ಅವರ ಮನೆಯಲ್ಲಿ ಇಟ್ಟುಕೊಂಡು ಓದಿಸಿ ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ಕುಟುಂಬದವರ ರಮೇಶನನ್ನು ಪ್ರಿತಿಯಿಂದ ನೋಡಿಕೊಂಡಿದ್ದು ಅವರಿಗೆ ಅವನನ್ನು ಕೊಲ್ಲುವ ಯಾವುದೇ ಉದ್ದೇಶ ಇರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು , ಚಾಸಾ-1 ಮತ್ತು 3 ರವರು ಗಾರೆ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿಯಲ್ಲ. ದಿ.01.02.2022 ರಂದು ಮಧ್ಯಾಹ್ನ 3-30 ಗಂಟೆಗೆ ನಾನು, ಚಾಸಾ-1 ಮತ್ತು 3 ರವರು ಊರಿನಲ್ಲಿ ಇರಲಿಲ್ಲ ಗಾರೆ ಕೆಲಸಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ರಮೇಶನ ಮಗ ಲಕ್ಷ್ಮೀಕಾಂತರಾಜು ಟೋಲ್ ನಲ್ಲಿ ಸೀಬೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ಎಂದರೆ ನಿಜ. ಘಟನಾ ಸ್ಥಳವು ಊರಿನ ಮಧ್ಯ ಭಾಗ ಎಂದರೆ ಮಧ್ಯ ಭಾಗಕ್ಕಿಂತ ಚೂರು ಕಡಿಮೆ. ಸದರಿ ಜಾಗ ಜನಸಂದಣಿ ಪ್ರದೇಶ ಎಂದರೆ ಸರಿಯಲ್ಲ. ಅಲ್ಲಿ ಸುತ್ತಲೂ ವಾಸದ ಮನೆಗಳು ಇರುತ್ತವೆ ಎಂದರೆ ಈ ಘಟನೆ ಮನೆ ಹಿಂಭಾಗದಲ್ಲಿ ಆಗಿದ್ದು ಮನೆ ಹಿಂಭಾಗದಲ್ಲಿ ಯಾವುದೇ ಬೇರೆ ಮನೆಗಳು ಇರುವುದಿಲ್ಲ ಅಕ್ಕ ಪಕ್ಕದಲ್ಲಿ ಮನೆಗಳು ಇರುತ್ತವೆ. ಘಟನಾ ಸ್ಥಳದಲ್ಲಿ ಪೆಟ್ಟಿಗೆ ಅಂಗಡಿ ಇರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಅದು ಸರಿಯಾಗಿರುತ್ತದೆ.

ನಾನು ನನ್ನ ಹೇಳಿಕೆಯಲ್ಲಿ ಬಡವನಹಳ್ಳಿ ಎಂದು ಬರೆಸಿರುವುದಿಲ್ಲ ಶಿವನಗರ ಎಂದು ಬರೆಸಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ರಮೇಶ್‌ನನ್ನು ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ ಎಂದು ಹೇಳಿರುತ್ತೇನೆ. ರಮೇಶ್ ರವರ ಹೆಂಡತಿ ಪುಟ್ಟಮ್ಮ ಹಾಗೂ ಕಾಂತರಾಜು ಅಲಿಯಾಸ್ ಲಕ್ಷ್ಮೀಕಾಂತ ಯಾವುದೋ ಕಾರಿನಲ್ಲಿ ಹೋದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ ನಾನು ಕೂಡ ಅವರ ಜೊತೆ ಹೋಗಿರುತ್ತೇನೆ ಎಂದು ಹೇಳಿರುತ್ತೇನೆ. **ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.**

ಮೃತ ರಮೇಶ ಮೂರ್ಚೆ ರೋಗದಿಂದ ಬಳಲುತ್ತಿದ್ದ ಎಂದರೆ ಸರಿಯಲ್ಲ. ರಮೇಶ ಮೂರ್ಚೆ ರೋಗದಿಂದ ಬಳಲುತ್ತಿದ್ದರಿಂದ ರಮೇಶ ನಿಮಾನ್ಸ್ ನಲ್ಲಿ ಚಿಕಿತ್ಸೆ ಪಡೆದುಕೊಂಡು ಯಾವಾಗಲೂ ಮಾತ್ರೆ ತೆಗೆದುಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಈ ಘಟನೆ ಆದಾಗಲೇ ರಮೇಶೇ ನಿಮಾನ್ಸ್ ಆಸ್ಪತ್ರೆಗೆ ಹೋಗಿರುತ್ತಾರೆ, ರಮೇಶ ಮೂರ್ಚೆ ರೋಗ ಬಳುತ್ತಿದ್ದರಿಂದ ಆರೋಪಿ , ಆತನ ಅಣ್ಣ ಮತ್ತು ನಾಗರಾರಜು ಆತನನ್ನು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸುಳ್ಳು. ನಾನು ಗಾರೆ ಕೆಲಸಕ್ಕೆ ಹೋಗಿರುವುದರಿಂದ ಊರಿನಲ್ಲಿ ನಡೆಯುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ರಮೇಶ ಮೂರ್ಚೆ ರೋಗದಿಂದ ಬಿದ್ದಿರುವರಿಂದ ಆತನ ಹೆಂಡತಿ ಮತ್ತು ಮಗಳು ಮನೆಗೆ ಕರೆದುಕೊಂಡು ಹೋಗಿ ಆತನಿಗೆ ಸ್ನಾಹ ಮಾಡಿಸಿರುತ್ತಾರೆ ಎಂದರೆ ಸುಳ್ಳು. ಆ ರೀತಿ ಸ್ನಾನ ಮಾಡಿಸಿರುವುದರಿಂದಲೇ ರಮೇಶನ ಆರೋಗ್ಯದಲ್ಲಿ ಏರು ಪೇರು ಆಗಿ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸುಳ್ಳು. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯೇ ಆ ದಿನ ಆರೋಪಿ ರಮೇಶನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ್ದು ಆಗಿರುತ್ತದೆ. ನಾನು ಕಣ್ಣಾರೆ ಘಟನೆಯನ್ನು ನೋಡಿದ್ದರಿಂದಲೇ ಮು.ಮಾ-1 ನ್ನು ಗುರುತಿಸುತ್ತೇನೆ. ನಾನು ಆ ದಿನ ಊರಲ್ಲಿ ಇರಲಿಲ್ಲ ಘಟನೆಯನ್ನು ಕಣ್ಣಾರೆಯಿಂದ ನೋಡಿರುವುದಿಲ್ಲ ಮತ್ತು ಮು.ಮಾ-1 ದೊಣ್ಣೆಯಿಂದ ಹೊಡೆದಿರುವುದನ್ನು ಕಣ್ಣಾರೆ ನೋಡಿಲ್ಲವಾದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ರಾಮಯ್ಯು ಅಣ್ಣ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ವರ್ದಿಸಿದ್ದ ಎನ್ನುವುದು ನಿಜ. ಆ ಸಮಯದಲ್ಲಿ ನಾನು ನಾಗರಾಜುವಿನ ವಿರುದ್ಧ ಕೆಲಸ ಮಾಡಿ ಚುನಾವಣೆಯಲ್ಲಿ ಸೊತುಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದ್ವೇಷ ಇಟ್ಟುಕೊಂಡು ಆರೋಪಿ ಕುಟುಂಬಕ್ಕೆ ತೊಂದರೆ ಕೊಡುಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮಾತುಕೇಳಿ ಸುಳ್ಳು ಹೇಳಿಕೆ ಕೊಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮಾತುಕೇಳಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು, ಚಾಸಾ-1 ಮತ್ತು 3 ರವರು ಅಪ್ತಸ್ನೇಹಿತರು ಎನ್ನುವುದು ನಿಜ, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**